KACB010008292023

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ

**ಸ್ಪೆಷಲ್ ಕೇಸ್ ನಂ. 41/2023**

ಫಿರ್ಯಾದಿಃ ಸರ್ಕಾರ - ಚಿಕ್ಕಬಳ್ಳಾಪುರ ಸಿಇಎನ್ ಪೊಲೀಸ್ ಠಾಣೆ

ವಿರುದ್ಧ

ಆರೋಪಿಃ ವೇಣುಗೋಪಾಲ ಕೆ ಎಸ್ ತಂದೆಃ ಸತ್ಯನಾರಾಯಣಪ್ಪ

## ದೋಷಾರೋಪಣೆ

ಶ್ರೀಮತಿ ಎನ್.ವಿ.ಭವಾನಿ, ಬಿ.ಎ. ಎಲ್.ಎಲ್.ಬಿ. ಹಾನರ್ಸ್ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಚಿಕ್ಕಬಳ್ಳಾಪುರ, ಆದ ನಾನು

ವೇಣುಗೋಪಾಲ ಕೆ ಎಸ್ , ತಂದೆಃ ಸತ್ಯನಾರಾಯಣಪ್ಪ
ವಯಸ್ಸು 39 ವರ್ಷ, ವಾಸಃ ವಾರ್ಡ್ ನಂಃ14, ಕಂದವಾರ,
ಚಿಕ್ಕಬಳ್ಳಾಪುರ ಟೌನ್

ನಿಮ್ಮ ವಿರುದ್ಧ ಆಪಾದಿಸುವುದೇನೆಂದರೆಃ

ದಿನಾಂಕ 20.09.2022 ರಂದು ಮಧ್ಯಾಹ್ನ 3.00 ಗಂಟೆಗೆ ಚಾಸಾ-1 ರವರು ತಮ್ಮ ಸಿಬ್ಬಂದಿಗಳಾದ ಚಾಸಾ-5 ರಿಂದ 9 ರವರೊಂದಿಗೆ ಚಿಕ್ಕಬಳ್ಳಾಪುರ ತಾಲ್ಲೂಕು, ಕಂದವಾರ ಗ್ರಾಮದ ವಾಸಿ ಆರೋಪಿಯಾದ ನಿಮ್ಮ ಜಮೀನಿಗೆ ದಾಳಿ ಮಾಡಿದಾಗ , ನೀವು, ನಿಮ್ಮ ಜಮೀನಿನಲ್ಲಿ ರೋಜಾ ಹೂವು ಗಿಡಗಳು ಮತ್ತು ಕನಕಾಂಬರ ಹೂವು ಗಿಡಗಳ ಮಧ್ಯದಲ್ಲಿ ಅಕ್ರಮವಾಗಿ ಮಾದಕ ವಸ್ತುವಾದ ಸುಮಾರು 10 ಕೆಜಿ 136 ಗ್ರಾಮ್ ತೂಕದ ಗಾಂಜಾ ಗಿಡಗಳನ್ನು ಯಾವುದೇ ಪರವಾನಿಗೆಯನ್ನು ಪಡೆಯದೇ ಅಕ್ರಮವಾಗಿ ಮಾರಾಟ ಮಾಡುವ ಉದ್ದೇಶದಿಂದ ಬೆಳೆಸಿದ್ದು ,

ಸದರಿ ಗಾಂಜಾ ಗಿಡಗಳೊಂದಿಗೆ ಸಿಕ್ಕಿಬಿದ್ದಿರುತ್ತೀರಿ. ಈ ಮೂಲಕ ನೀವು ಎನ್.ಡಿ.ಪಿ.ಎಸ್. ಕಾಯ್ದೆ 1985ರ 20(a) ರನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಸದರಿ ಆರೋಪದ ಮೇಲೆ ನೀವು ಈ ನ್ಯಾಯಾಲಯದಿಂದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ : 02 ನೇ ಏಪ್ರಿಲ್ 2024.

(ಎನ್.ವಿ. ಭವಾನಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ

ಸ್ಪೆಷಲ್ ಕೇಸ್ ನಂ. **41/2023**

ಫಿರ್ಯಾದಿಃ ಸರ್ಕಾರ – ಚಿಕ್ಕಬಳ್ಳಾಪುರ ಸಿಇಎನ್ ಪೊಲೀಸ್ ಠಾಣೆ

ವಿರುದ್ಧ

ಆರೋಪಿಃ ವೇಣುಗೋಪಾಲ ಕೆ ಎಸ್ ತಂದೆಃ ಸತ್ಯನಾರಾಯಣಪ್ಪ

## ದೋಷಾರೋಪಣೆ

| | | |
|---|---|---|
| ಆರೋಪಿಯ ಹೆಸರು | – | ವೇಣುಗೋಪಾಲ ಕೆ ಎಸ್ |
| ತಂದೆ ಹೆಸರು | – | ಸತ್ಯನಾರಾಯಣಪ್ಪ |
| ವಯಸ್ಸು | – | 39 ವರ್ಷ |
| ಉದ್ಯೋಗ | – | ವ್ಯವಸಾಯ |
| ವಾಸ | – | ಕಂದವಾರ ಗ್ರಾಮ, ಚಿಕ್ಕಬಳ್ಳಾಪುರ ತಾಲ್ಲೂಕು. |

## ಆರೋಪಿಯ ಹೇಳಿಕೆ

ಪ್ರಶ್ನೆಃ ನಿಮ್ಮ ಮೇಲೆ ಮಾಡಿದ ದೋಷಾರೋಪಣೆಯ ವಿವರಗಳು ನಿಮಗೆ ತಿಳಿಯಿತೆ?
ಉತ್ತರಃ ತಿಳಿಯಿತು

ಪ್ರಶ್ನೆಃ ನೀವು ತಪ್ಪು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆ ಆಗಬೇಕೆದಂದು ಬಯಸುತ್ತೀರಾ?
ಉತ್ತರಃ ತಪ್ಪು ಮಾಡಿಲ್ಲ, ವಿಚಾರಣೆ ಬೇಕು

ಮೇಲೆ ಹೇಳಿದ ದೋಷಾರೋಪಣೆಗಳನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು.

ದಿನಾಂಕ : 02 ನೇ ಏಪ್ರಿಲ್ 2024.

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ.**